ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಪಿ.ಪಿ.ಎನ್ ವಕೀಲರಿಂದಃ**

1. ನನ್ನ ಮಾವನ ಹೆಸರು ಭೀಮಪ್ಪ ದಳವಾಯಿ, ಸಿದ್ದವ್ವ ನನ್ನ ಅತ್ತೆ. ಸದರಿ ನನ್ನ ಮಾವನಿಗೆ 6 ಜನ ಗಂಡು 6 ಜನ ಹೆಣ್ಣು ಮಕ್ಕಳು ಅವರೆಂದರೆ ಮಲ್ಲಪ್ಪ, ರಮೇಶ ಹಾಗೂ ಕಲ್ಲಪ್ಪ, ಸಿದ್ದರಾಮ ಮೃತ ಪಟ್ಟಿದ್ದು ಇನ್ನು ಇಬ್ಬರು ಗಂಡು ಮಕ್ಕಳು ಚಿಕ್ಕ ಮಕ್ಕಳು ಇದ್ದಾಗ ಮೃತ ಪಟ್ಟಿದಾರೆ. ಹೆಣ್ಣು ಮಕ್ಕಳು ಮಾಹಾದೇವಿ, ಕಸ್ತೂರಿ, ಕಮಲವ್ವ, ಗಂಗವ್ವ, ಗೌರವ್ವ ಹಾಗೂ ಬೊರಮ್ಮರವರು ಮೃತಪಟ್ಟಿರುತ್ತಾರೆ. ಸದರಿ ಬೊರಮ್ಮ ಮದುವೆಯಾದ ನಂತರ ಮೃತಪಟ್ಟಿದ್ದಾರೆ. ಬೊರಮ್ಮರವರ ಗಂಡನ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿ ಹೆಸರು ಮಹಾದೇವಿ. ಸದರಿ ನನ್ನ ತಾಯಿ ನನ್ನ ಗಂಡ ಸಿದ್ದರಾಮನ ಅಕ್ಕ ಎಂದರೆ ಸರಿ. ದಿಃ 17-05-2017 ರಂದು ಕೊಣ್ಣುರು ಕರಿಸಿದ್ದೇಶ್ವರ ದೇವಾಲಯದಲ್ಲಿ ನನ್ನ ಮದುವೆಯಾಗಿತ್ತು. ನನಗೆ ಮಕ್ಕಳು ಇಲ್ಲಾ. ನನ್ನ ಗಂಡ ನಾನು ಮೊದಲು 2 ವರ್ಷ ಚೆನ್ನಾಗಿದ್ದೇವು ನಂತರ ವೈಮನಸ್ಸು ಉಂಟಾಯಿತು. ಅದಾದ ನಂತರ ಅವರ ಜೊತೆಯೇ ಬಾಳ್ವೆ ಮಾಡುತ್ತಿದ್ದೇನು. ನಂತರ ನಾನು ನನ್ನ ಗಂಡನ ವಿರುದ್ದ ವಿಚ್ಚೇದನ ಕೋರಿ 2025 ರಲ್ಲಿ ಅರ್ಜಿ ಸಲ್ಲಿಸಿದ್ದೇನು. 25-05-2025 ರಂದು ನನ್ನ ಗಂಡ ಮೃತಪಟ್ಟರು. ಸದರಿ ವಿಚ್ಚೇದನ ಅರ್ಜಿ ಚಾಲ್ತಿ ಇದ್ದಾಗಲೇ ನನ್ನ ಗಂಡ ಮೃತಪಟ್ಟರು. ಸದರಿ ವಿಚ್ಚೇದನ ಅರ್ಜಿ ಸಲ್ಲಿಸುವ ಸುಮಾರು 6 ತಿಂಗಳ ಮುಂಚೆಯಿಂದ ನಾನು ತವರು ಮನೆಯಲ್ಲಿ ಇದ್ದೇನು. ನಾನು ಮದುವೆಯಾದಾಗಿನಿಂದ ಗಂಡನ ಜೊತೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಸದರಿ ಅರ್ಜಿ ಸಲ್ಲಿಸುವ ಮುಂಚೆ ನ್ಯಾಯಪಂಚಾಯತಿ ಆಗಿರುವುದಿಲ್ಲ.

2. ಹೀರೆಪಡಸಲಗಿ ಗ್ರಾಮದಲ್ಲಿ ನ್ಯಾಯ ಪಂಚಾಯತಿ ಹಿರಿಯರ ಸಮ್ಮುಖ ನಡೆದು ನನಗೆ ಎಷ್ಟು ಪಾಲು ಆಗಬೇಕು ಎಂದು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವೆದ ಪಾಟೀ ಸವಾಲಿಗಾಗಿ ಕಾಲವಕಾಶ ಕೋರುತ್ತಾರೆ, ಕಾಲವಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ